ಮೇಲೆ, ಈ ಬಗ್ಗೆ ನಾನು ನನ್ನ ಸಲಹೆಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅಧ್ಯಕ್ಷರೆ, ಇದಕ್ಕೆ ಸಂಬಂಧಿಸಿದಂತೆ ನಾನೊಂದು ನಿಲುವಳಿ ಸೂಚನೆಯನ್ನು ತಂದಿದ್ದೇನೆ, ತಾವು ಅನುಮತಿ ನೀಡಬೇಕು.

ಅಧ್ಯಕ್ಷರು: ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಕಾನೂನು ಸುವ್ಯವಸ್ಥೆಯ ವಿಚಾರವನ್ನು ನಿಲುವಳಿ ಸೂಚನೆಯಲ್ಲಿ ತರುವುದಕ್ಕೆ ಅವಕಾಶವಿಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್: ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲೆ ಪದೇ ಪದೇ ಏನು ದಾಳಿಯಾಗುತ್ತಿದೆ.

ಅಧ್ಯಕ್ಷರು: ಆದರೆ ನಿಯಮ ಬಿಟ್ಟು ಮಾಡುವುದಕ್ಕಾಗುವುದಿಲ್ಲ. ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅದನ್ನು ಮಾತನಾಡಬಹುದು, ನಿಲುವಳಿ ಸೂಚನೆಗೆ ಅವಕಾಶವಿಲ್ಲ, ನಾನು ತಿರಸ್ಕಾರ ಮಾಡಿದ್ದೇನೆ, ಬೇರೆ ರೀತಿಯಲ್ಲಿ ಪ್ರಸ್ತಾಪ ಮಾಡಿ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುತ್ತಿಲ್ಲ, ನಿನ್ನೆ ನಮ್ಮ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಸಾಹೇಬರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾನು ಕೂಡ ಪ್ರಸ್ತಾಪ ಮಾಡಿದೆ, ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು, ಅವರು ಹೇಳಿಕೆ ಕೊಟ್ಟ ಮೇಲೆ ನಾನು ವಾದ ವಿವಾದ ಮಾಡಬಾರದು, ರಾಜ್ಯದಲ್ಲಿ ಶಾಂತಿ ನಿರ್ಮಾಣವಾಗಬೇಕು, ನಾವು opposition ನಲ್ಲಿ ಕುಳಿತುಕೊಂಡು ಬರೀ ರಾಜಕೀಯ ಮಾಡುವುದು ಬೇಡವೆಂದು ನಾನು ಏನು ಮಾತನಾಡುವುದಕ್ಕೆ ಹೋಗಲಿಲ್ಲ. ನಾನು ಹೇಳುವುದಿಷ್ಟೆ, ನಿನ್ನೆ ಮುಖ್ಯಮಂತ್ರಿಗಳು statement ಮಾಡಿದ ಮೇಲೆ ಅಷ್ಟು ಹೊತ್ತಿಗೆ ಅವರಿಗೆ ಗೊತ್ತಿರಲಿಲ್ಲ, ಹಾಸನದಲ್ಲಿ ಅಲ್ಪಸಂಖ್ಯಾತರ ಅಂಗಡಿಗಳು ಲೂಟಿಯಾಯಿತು, ಅಲ್ಲಲ್ಲಿ attack ಗಳು ಶುರುವಾಯಿತು. ಅವರಿಗೆ ಸರಿಯಾಗಿ ಮಾಹಿತಿಗಳು feed back ಆಗಿಲ್ಲ. ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯರವರು ಹೇಳಿದಂತೆ, ನಾವು